# ಕರ್ನಾಟಕ ವಿಧಾನ ಪರಿಷತ್ತು

**ವಿಷಯ:** ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನ ಚಾಲಕರು ಹಾಗೂ 'ಡಿ' ಗುಂಪಿನ ನೌಕರರಿಗೆ ಸೋಪ್ ಹಾಗೂ ಟವಲ್‌ಗಳನ್ನು ವಿತರಿಸುವುದನ್ನು ರದ್ದುಗೊಳಿಸುವ ಕುರಿತು.

******

**ಓದಲಾಗಿದೆ:**

1. ಆದೇಶ ಸಂಖ್ಯೆ:ಕವಿಪ/ಆ-1/18/ಟಖ/2007, ದಿನಾಂಕ:13.07.2007
2. ಕಡತ ಸಂ:ಕವಿಪ/ಶಾಭ/ಎಸ್-236ಬಿ/ಸೋಖ/15-18(ಭಾಗ-3) ಕಂಡಿಕೆ ಸಂಖ್ಯೆ:214 ರಿಂದ 233 ರವರೆಗೆ.
3. ಕಡತ ಸಂ:ಕವಿಪ/ಶಾಭ/819/ಟಖ/2020-23(ಭಾಗ-4) ಕಂಡಿಕೆ ಸಂಖ್ಯೆ:52 ರಿಂದ 59ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರುಗಳಿಗೆ ತಲಾ 02 ಟವಲ್‌ಗಳನ್ನು ಮತ್ತು 'ಡಿ' ಗುಂಪಿನ ನೌಕರರುಗಳಿ ತಲಾ 01 ಟವಲ್‌ನ್ನು ಹಾಗೂ ಸದರಿ ನೌಕರರುಗಳಿಗೆ ಪ್ರತಿ ತಿಂಗಳು ತಲಾ ಒಂದು ಮೈಸೂರು ಸ್ಯಾಂಡಲ್ ಸೋಪ್‌ನ್ನು ವಿತರಿಸಲು ಅನುಮೋದಿಸಲಾಗಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ: (2) ಮತ್ತು (3)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯಗಳ ಸ್ವಚ್ಛತಾ ಕಾರ್ಯ ನಿರ್ವಹಣೆ, ಕಚೇರಿಗಳನ್ನು ಸ್ವಚ್ಛಗೊಳಿಸಲು ಹಾಗೂ ಕಾರುಗಳನ್ನು ಶುಚಿಗೊಳಿಸಲು ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾಗಾರರು ಹಾಗೂ ಸಫಾಯಿ ಕರ್ಮಚಾರಿಗಳನ್ನು (ಸ್ವಚ್ಛತಾ ಸಾಮಾಗ್ರಿಗಳು ಸೇರಿದಂತೆ) ಕರಾರು ಒಪ್ಪಂದದ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದರಿಂದ ಆರ್ಥಿಕ ವೆಚ್ಚವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಇನ್ನು ಮುಂದೆ ಶಾಸಕರ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರುಗಳಿಗೆ ಮತ್ತು 'ಡಿ' ಗುಂಪಿನ ನೌಕರರುಗಳಿಗೆ ಟವಲ್‌ಗಳನ್ನು ಹಾಗೂ ಪ್ರತಿ ತಿಂಗಳು ತಲಾ ಒಂದು ಮೈಸೂರು ಸ್ಯಾಂಡಲ್ ಸೋಪ್‌ನ್ನು ವಿತರಿಸುವ ಪದ್ಧತಿಯನ್ನು ಮುಂದುವರೆಸುವುದನ್ನು ರದ್ದುಪಡಿಸಲು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1:11:ಸೋಪ್/ಟವಲ್:2024**
**ಬೆಂಗಳೂರು, ದಿನಾಂಕ: 27.06.2024.**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವ್ಯಾಪ್ತಿಗೆ ಬರುವ ಕೊಠಡಿಗಳು, ಶೌಚಾಲಯಗಳ ಸ್ವಚ್ಛತಾ ಕಾರ್ಯ ನಿರ್ವಹಣೆ, ಕಚೇರಿಗಳನ್ನು ಸ್ವಚ್ಛಗೊಳಿಸಲು ಹಾಗೂ ಕಾರುಗಳನ್ನು ಶುಚಿಗೊಳಿಸಲು ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾಗಾರರು ಹಾಗೂ ಸಫಾಯಿ ಕರ್ಮಚಾರಿಗಳನ್ನು (ಸ್ವಚ್ಛತಾ ಸಾಮಾಗ್ರಿಗಳು ಸೇರಿದಂತೆ) ಕರಾರು ಒಪ್ಪಂದದ ಮೇಲೆ ನೇಮಕ ಮಾಡಿಕೊಂಡಿರುವುದರಿಂದ ಆರ್ಥಿಕ ವೆಚ್ಚವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಇನ್ನು ಮುಂದೆ ಶಾಸಕರ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರುಗಳಿಗೆ ಮತ್ತು 'ಡಿ' ಗುಂಪಿನ ನೌಕರರುಗಳಿಗೆ ಟವಲ್‌ಗಳನ್ನು ಹಾಗೂ ಪ್ರತಿ ತಿಂಗಳು ಸೋಪ್‌ನ್ನು ವಿತರಿಸುವುದನ್ನು ರದ್ದುಪಡಿಸಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,

27/6/24

(ಕೆ.ಜೆ.ಜಲಜಾಕ್ಷಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

<u>ಪ್ರತಿಗಳು:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಅಪರ/ ಜಂಟಿ/ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
5. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ, ಕವಿಪ
6. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.
7. ಅಧೀನ ಕಾರ್ಯದರ್ಶಿ, ಗಣಕ ಕೇಂದ್ರ, ಕವಿಪ.
8. ಆರ್ಥಿಕ ಅಧಿಕಾರಿ, ಕವಿಪ.
9. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ.